ಒಂದು ಕಾಲನ್ನು ನಾಡಿನಲ್ಲೂ, ಇನ್ನೊಂದು ಕಾಲನ್ನು ಕಾಡಿನಲ್ಲೂ ನೆಟ್ಟಿರುವ ಪ್ರಸಾದ್ ಶೆಣೈ ಆರ್.ಕೆ. ಕಥನ ಕುತೂಹಲಿ. ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವೀಧರ. ಪತ್ರಕರ್ತನ ಕಣ್ನೋಟ ಅವರ ಬರಹಗಳಿಗೂ ಕಥೆಗಳಿಗೂ ಹೊಸ ಹೊಳಪು ತಂದುಕೊಟ್ಟಿದೆ. ಕಾರ್ಕಳದ ಪ್ರಸಾದ್ ವೃತ್ತಿಯಿಂದ ಉಪನ್ಯಾಸಕರು. ಬರವಣಿಗೆಯೊಂದಿಗೆ ಫೋಟೊಗ್ರಫಿ ಹಾಗೂ ಅಲೆದಾಟದಲ್ಲಿ ವಿಶೇಷ ಆಸಕ್ತಿ. 'ಲೂಲು ಟ್ರಾವೆಲ್ಸ್' (ಕಥೆಗಳು) ಹಾಗೂ 'ಒಂದು ಕಾಡಿನ ಪುಷ್ಪಕ ವಿಮಾನ' (ಲೇಖನಗಳು) ಪ್ರಕಟಿತ ಕೃತಿಗಳು.

ಪದ್ಯ ಕಲಿತು ರಂಗಸ್ಥಳದಲ್ಲಿ ಹಾಡಿ ಎಲ್ಲರ ಸಿಳ್ಳೆ, ಚಪ್ಪಾಳೆ ಗಿಟ್ಟಿಸಿಕೊಳ್ಳಬೇಕು ಎನ್ನುವ ಆಸೆಯೂ ಅವನೊಳಗೆ ಅಸ್ಪಷ್ಟವಾಗಿತ್ತು. ಪಿಯುಸಿ ಮುಗಿದ ಮೇಲೆ ಸಂಬಂಧಿಕರೊಬ್ಬರ ಸಹಾಯದಿಂದ ಗಿರಿಧರ ಒಂದಷ್ಟು ವರ್ಷ ಉತ್ತರ ಕನ್ನಡದ ಶಿರಸಿಯಲ್ಲಿರುವ ಯಕ್ಷಗಾನ ಪರಂಪರೆಯ ಹಿರಿಯ ಭಾಗವತರಲ್ಲಿ ಯಕ್ಷಗಾನ ಭಾಗವತಿಕೆ ಕಲಿತ. ಆಮೇಲೆ ಹುಟ್ಟೂರಾದ ಸೀತಾನದಿಗೆ ಬಂದು ಅಲ್ಲಿ ಇಲ್ಲಿ ಹಾಡುತ್ತ ಕಾಲ ಕಳೆಯುತ್ತಿದ್ದ. ಯಕ್ಷಗಾನವನ್ನೇ ಉದ್ಯೋಗ ಮಾಡಿಕೊಳ್ಳಬೇಕು ಎನ್ನುವ ಉತ್ಕಟ ಆಸೆ ಅವನೊಳಗಿತ್ತು. ಯಾವುದೋ ದೇವಸ್ಥಾನದಲ್ಲಿ ಇವನು ಭಜನೆ ಪದ್ಯ ಹಾಡುತ್ತಿದ್ದಾಗ, ಅಲ್ಲೇ ಇದ್ದ ಅಣ್ಣಪ್ಪ ನಾಯಕ್ರಿಗೆ, ಇವನು ಭಜನೆ ಹಾಡುತ್ತಿಲ್ಲ, ಯಕ್ಷಗಾನ ಪದವೇ ಹೇಳುತ್ತಿದ್ದಾನೆ ಅಂತೆಲ್ಲಾ ಅನ್ನಿಸಿಬಿಟ್ಟಿತು. ಭಾಗವತಿಕೆಯನ್ನು ಅಭ್ಯಾಸ ಮಾಡದಿದ್ದರೂ, ರಾಗವಿಲ್ಲದಿದ್ದರೂ ಅದರ ಕುರಿತು ಒಂದಷ್ಟು ಜ್ಞಾನ, ಕೌತುಕ ಎಲ್ಲವೂ ಇದ್ದ ನಾಯ್ಕರಿಗೆ, ಅವನು ಹಾಡುವ ಶೈಲಿ, ಅದರಲ್ಲಿದ್ದ ಮೃದುತ್ವ, ಇಂಪು ಎಲ್ಲವೂ ಜಿಗ್ಗಂತ ತಟ್ಟಿಬಿಟ್ಟಿತು.

ಭಜನೆ ಮುಗಿದ ಮೇಲೆ ಗಿರಿಧರನನ್ನು ಸುಮ್ಮನೆ ಮಾತಾಡಿಸಿದರು, 'ನೀನು ಎಲ್ಲಾದ್ರೂ ಯಕ್ಷಗಾನ ಕಲಿತವನಾ? ಬರೀ ಭಜನೆ ಅಂತ ಅನ್ನಿಸ್ಲಿಲ್ಲ ನಿನ್ನ ರಾಗ. ಭಾಗವತಿಕೆ ಕೇಳಿದ ಹಾಗೆ ಅನ್ನಿಸ್ತು' ಎಂದರು. ಹುಡುಗ ನಾಚಿ, ಕೊನೆಗೂ ಹೀಗಾದ್ರೂ ಒಬ್ಬರು ನನ್ನನ್ನು ಭಾಗವತ ಅಂದ್ರಲ್ಲ ಎಂದು ಉಬ್ಬಿ, 'ಹೌದೌದು, ನಾನು ಅಭ್ಯಾಸ ಮಾಡಿದ್ದೇನೆ. ಆದ್ರೆ ಮೇಳದಲ್ಲೆಲ್ಲಾ ಹಾಡ್ಲಿಕ್ಕೆ ಅವಕಾಶ ಸಿಗ್ಲಿಲ್ಲ' ಎಂದ.

ನಾಯ್ಕರಿಗೇನನ್ನಿಸಿತೋ, 'ಅವಕಾಶ ನಾನು ಕೊಡಿಸ್ತೇನೆ ಮಾರಾಯ. ಹುಡುಗ್ರು ಬೆಳೆಯದೇ ಮತ್ಯಾರು ಬೆಳೆಯುದು? ಸೀತಾನದಿಯಲ್ಲೇ ಇದ್ದು ನಿಂತ ನೀರಾಗಬೇಡ. ಇದೇ ಸೀತಾನದಿ, ಘಟ್ಟವನ್ನೂ ಸುತ್ತು ಬಳಸಿ ಕೊನೆಗೆ ಅರಬ್ಬಿ ಸೇರ್ತದೆ. ನದಿಯಂತೆ ಬದುಕು ಹರಿತಾ ಇರ್ಬೇಕು, ನಿನ್ನ ರಾಗವೂ ಅಷ್ಟೇ. ರಾಗ ನಿಂತರೆ ಲೋಕ ನಿಂತಂತೆ, ನೀನು ಇಷ್ಟೊಳ್ಳೆ ರಾಗವಿದ್ದೂ ಸತ್ತಂತೆ' ಎಂದು ಅಚಲವಾಗಿ ಹೇಳಿದರು. ಅವರ ಮಾತಿಗೆ ಇನ್ನಷ್ಟು ಉತ್ತೇಜಿತಗೊಂಡ 26ರ ತರುಣ ಗಿರಿಧರ, ಭಾಗವತನಾಗಿಯೇಬಿಟ್ಟೆ ಎನ್ನುವ ಹಿತವಾದ ಅನುಭೂತಿ ಬಂದಂತೆ ಉಬ್ಬಿಹೋದ. ಗಿರಿಧರನ ಕಣ್ಣುಗಳಾಗ ಚಳಿಗಾಲದ ನಕ್ಷತ್ರಗಳು ಹೊಳೆಯುವಂತೆ ಹೊಳೆಯುತ್ತಿದ್ದವು.

'ಅವಕಾಶ ನಾ ಕೊಡ್ಸಿಸ್ತೇನೆ' ಅಂತೇನೋ ಹೇಳಿದ್ದು ಹೌದು. ಆದರೆ ಎಲ್ಲಿ ಕೊಡಿಸಲಿ ಎನ್ನುವುದನ್ನು ಆಮೇಲೆ ಕೂತು ಯೋಚಿಸುವ ಸ್ಥಿತಿ ಬಂತು ಅಣ್ಣಪ್ಪ ನಾಯಕರಿಗೆ. ನನ್ನ ಮಾತಿಗೆ ಯಾವುದೋ ಮೇಳದವರು ಜಾಗ ಕೊಟ್ಟು, ಕೊನೆಗವರ ನಿರೀಕ್ಷೆ ಠುಸ್ಸಾಗಿ, 'ನೀವ್ ಹೇಳಿದ್ರಿಂದ್ಲೇ ಕೊಡಿಸಿದ್ದು, ಆದ್ರೆ ಈ ಹುಡ್ಗ ಸುಖ ಇಲ್ಲ' ಅಂತ ಕೊನೆಗೆಲ್ಲವೂ ನನ್ನ ಕುತ್ತಿಗೆಗೆ ಬಂದ್ರೆ ಎನ್ನುವ ಅಳುಕಾಯಿತು ಅಣ್ಣಪ್ಪ ನಾಯಕ್ರಿಗೆ. ಆದರೆ ಊರಲ್ಲಿ ಮಲ್ಲಿಗೆಯಂತೆ ಸಣ್ಣಗೆ ಅರಳುತ್ತಿರುವ ಆ ಹುಡುಗನ ಸ್ವರದ ಪರಿಮಳ ಬರೀ ಅವನಿಗಷ್ಟೇ ಬಂದ್ರೆ ಸಾಕಾ, ನಾಡೇ ಅವನ ಆ ಪರಿಮಳವನ್ನು ಆಘ್ರಾಣಿಸಬೇಕು ಎಂದೆಲ್ಲಾ ಅನ್ನಿಸಿದ ಮೇಲೆ ಊರಿನ ದೇವಸ್ಥಾನವೊಂದರ ಧರ್ಮದರ್ಶಿಯವರ ಬಳಿ ಮಾತಾಡಿ, 'ಹುಡುಗ ಒಳ್ಳೆ ಇದ್ದಾನೆ, ಸ್ವರ ಚೆಂದ ಉಂಟು, ಬೆಳೆಯುದಾದ್ರೆ ಬೆಳೀಲಿ ಅಲ್ವಾ, ನೆಟ್ಟ ಗಿಡ ಚಿಗುರಿ ಫಲ ಕೊಟ್ಟರೆ, ಆ ಫಲ ಇಡೀ ಊರಿಗೇ ಅಲ್ವಾ, ಅದೇ ಶ್ರೇಷ್ಠ, ಅದೇ ದೇವರ ಕೆಲಸ ಅಲ್ವಾ' ಎಂದರು.

ದೇವಸ್ಥಾನದ ಚಾಮುಂಡೇಶ್ವರಿ ಯಕ್ಷಗಾನ ಮಂಡಳಿಯಲ್ಲಿ ಮೊದಲ ಒಂದೆರಡು ಪದ ಹೇಳುವ